ಮಾಡೋಣ ಎಂದು ಹೇಳಿದ್ದಾರೆ. ಆದರೆ ಅನೇಕ ವಿಚಾರಗಳಿಗೆ ಮಾನ್ಯ ನಾಗೇಗೌಡರು ಇಲ್ಲಿ ಉತ್ತರ ಕೊಟ್ಟಿಲ್ಲ. ನಾವು ಅಂಕಿ ಅಂಶಗಳನ್ನು ಒದಗಿಸುತ್ತೇವೆ. ಅಂದರೂ ಕೂಡ ಅವರಿಂದ ನಾನು ಉತ್ತರವನ್ನು ತಲುಪಿಸುತ್ತೇನೆ ಎನ್ನುವಂತಹ ಒಂದು ಉತ್ತರ ಬರುತ್ತಿದೆ. ನಾವು ಕೂಡಲೇ ಈ ಪ್ರಾಜೆಕ್ಟ್ ಬಗ್ಗೆ ಯೋಜನೆಗಳ ಬಗ್ಗೆ ಏನೇನು ಅನ್ಯಾಯವಾಗಿದೆ, ಅವ್ಯವಹಾರವಾಗಿದೆ ಎಂದು ಒಕ್ಕೂರಲಿನಿಂದ ಕೇಳುತ್ತಿದ್ದೇವೆ. ಇದರ ಬಗ್ಗೆ ಉನ್ನತ ಮಟ್ಟದ ತನಿಖೆ ನಡೆಸಬೇಕು. ಯಾವುದೇ ರೀತಿಯಿಂದ ರಾಜ್ಯದ ಹಿತಾಸಕ್ತಿಗೆ ತೊಂದರೆಯಾಗುವ ರೀತಿಯಲ್ಲಿ ಕೆಲಸಗಳು, ಕಾಮಗಾರಿಗಳು ನಿಲ್ಲಬಾರದು. ಇದನ್ನು ನಾವು ಆಗ್ರಹಿಸಿ, ಈ ಮೂಲಕವಾದರೂ ಕೂಡ ಸರ್ಕಾರ ಕಣ್ಣು ತೆರೆಯಬೇಕೆಂದು ಹೇಳುತ್ತಾ, ನಾವು ಈ ಸಭೆಯನ್ನು ಬಿಟ್ಟು ಸಭಾತ್ಯಾಗ ಮಾಡುತ್ತಿದ್ದೇವೆ.

(ಈ ಹಂತದಲ್ಲಿ ಭಾರತೀಯ ಜನತಾ ಪಕ್ಷದ ಸದಸ್ಯರು ಶ್ರೀ ಸುರೇಶ್‌ಕುಮಾರ್‌ರವರ ನೇತೃತ್ವದಲ್ಲಿ ಸಭಾತ್ಯಾಗ ಮಾಡಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೇ , ಎರಡು ಸಾವಿರ ವರ್ಷದೊಳಗಾಗಿ ಕೃಷ್ಣಾ ಮೇಲ್ದಂಡೆ ಯೋಜನೆ ಕಾಮಗಾರಿಗಳನ್ನು ಈ ಸರ್ಕಾರ ಮುಗಿಸುತ್ತದೆ ಎಂಬ ನಂಬಿಕೆ ನಮಗಿಲ್ಲ. ನಾನು ಈ ಬಗ್ಗೆ ಇಲ್ಲಿ ನಿರಂತರವಾಗಿ ಒತ್ತಾಯ ಮಾಡುತ್ತಲೇ ಇದ್ದೇನೆ. ಆದರೆ ಸರ್ಕಾರ ಇದನ್ನು ಮುಗಿಸತಕ್ಕ ವ್ಯವಸ್ಥೆ ಮಾಡಿಲ್ಲ. ಆದ್ದರಿಂದ ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತಿದ್ದೇನೆ.

(ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಸಭಾತ್ಯಾಗ ಮಾಡಿದರು)

ಶ್ರೀ ಎಂ.ಪಿ.ಪ್ರಕಾಶ್ : ..... ಅವರು ಈಗ ನಾವು ಹೇಳುವುದು ಹೇಳುತ್ತೇವೆ, ನೀವು ಕೇಳುವುದಕ್ಕೆ ತಯಾರಿಲ್ಲ ಎಂದು ಹೊರಟು ಹೋಗುತ್ತಾರೆ. It is most unfair. ಮಾಡುವ ಅಲಿಗೇಷನ್ಸ್‌ಗಳು ಮಾಡಿದ ಮೇಲೆ, ಉತ್ತರ ಕೂಡ ಕೇಳುವುದಕ್ಕೆ ಇಷ್ಟಲ್ಲವೆಂದರೆ ಹೇಗೆ? ಮಾನ್ಯ ಅಧ್ಯಕ್ಷರೇ, ದಾಖಲಾತಿಗಳು ಸರಿಯಾಗಿ ಇರಬೇಕು ಎನ್ನುವ ಕಾರಣಕ್ಕಾಗಿಯೇ ನಾನು ನಿಮ್ಮಲ್ಲಿ ಅರಿಕೆ ಮಾಡಿಕೊಳ್ಳುತ್ತಿದ್ದೇನೆ, ಅವರು 459 ಕೋಟಿ ರೂ.ಗಳು ಬಿಡುಗಡೆಯಾಗಿದೆ.....

ಅಧ್ಯಕ್ಷರು : ಪ್ರಧಾನ ವಿರೋಧ ಪಕ್ಷದವರನ್ನು ಬಾವಿಯಲ್ಲಿ ನಿಲ್ಲಿಸಿಕೊಂಡೇ ಮಾತನಾಡುತ್ತಿದ್ದೀರಲ್ಲಾ.

ಶ್ರೀ ಎಂ.ಪಿ. ಪ್ರಕಾಶ್ : ಹೌದು, ಅವರು ಸದನದ ಬಾವಿಯಲ್ಲಿದ್ದಾರೆ. ಅವರು ಧರಣಿ ಹಿಂತೆಗೆದುಕೊಂಡು ಹೋಗಿ ಕುಳಿತುಕೊಳ್ಳಬೇಕೆಂದು ಅವರಿಗೆ ಕೇಳಿಕೊಳ್ಳುತ್ತಿದ್ದೇನೆ. ಅವರು ಹೇಳಿದ್ದು ದಾಖಲೆಗೆ ಹೋದ ಮೇಲೆ, ಅದನ್ನು ಸರಿಪಡಿಸಬೇಕಾದುದು ಸರ್ಕಾರದ ಕರ್ತವ್ಯ. ಆದ್ದರಿಂದ ಈಗ ಮಾತನಾಡಲು ತಮ್ಮ ಅಪ್ಪಣೆ ಕೇಳುತ್ತಿದ್ದೇನೆ.